ಅಧ್ಯಕ್ಷರು.—ತಾವು ಬೇಗ ಮುಗಿಸಬೇಕು.

ಶ್ರೀಮತಿ ಮುಕ್ತರುನ್ನೀಸಾ.—ಮಾನ್ಯ ಮಂತ್ರಿಗಳು ಬಹಳ ದೊಡ್ಡದಾದ ಉತ್ತರವನ್ನು ಕೊಟ್ಟಿದ್ದಾರೆ. ನಾನು ಸ್ವಲ್ಪ ಹೇಗೆ ಕೇಳಬೇಕು ?

ಶ್ರೀ ವೇದಾಂತ ಹೆಮ್ಮಿಗೆ.—ಶ್ರೀಮತಿ ಮುಕ್ತರುನ್ನೀಸಾರವರು ಬಾಡಿ, ಬಾಡಿಯೆಂದು ಹೇಳುತ್ತಿದ್ದಾರೆ ಅದು ಯಾವ ಬಾಡಿ ಎಂದು ಕೇಳುತ್ತಿದ್ದೇನೆ.

ಶ್ರೀಮತಿ ಮುಕ್ತರುನ್ನೀಸಾ.—ಎಲಿಫೆಂಟ್ ಬಾಡಿ ಎಂದು ನಾನು ಹೇಳಿದ್ದುದು. ಆಮೇಲೆ ಇನೇ ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ಮೂರು ರಾಜ್ಯಗಳ ಅರಣ್ಯ ಮತ್ತು ಆರಕ್ಷಕ ಅಧಿಕಾರಿಗಳ ಸಭೆಯನ್ನು ಆಗಾಗ್ಗೆ ಕರೆದು ಆನೆ ಹತ್ಯೆಯನ್ನು ತಡೆಯುವ ಬಗ್ಗೆ ಹೇಳಿದ್ದಿರಿ. ಈಗ ಒಟ್ಟು ಎಷ್ಟು ಆನೆಗಳನ್ನು ಕೊಲ್ಲಲಾಗಿದೆ ? ಈ ಕಮಿಟಿಯಲ್ಲಿ ಕರ್ನಾಟಕದವರು ಎಷ್ಟು ಮಂದಿ ಇದ್ದಾರೆ ?

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ.

ಶ್ರೀ ಜಿ.ಎಸ್. ದೇಶ್‌ಮುಖ್.—೧೯೮೦-೮೧ರಿಂದ ೧೯೮೬-೮೭ ರವರೆಗೆ ಒಟ್ಟು ೧೦೮ ಆನೆಗಳನ್ನು ಕೊಲ್ಲಲಾಗಿದೆ. ದಂತ ಕೆ.ಜಿ.ಗೆ ೧೮೦೦ ರಿಂದ ೨೦೦೦ ರೂಪಾಯಿಗಳವರೆಗೆ ಮಾರಲಾಗುತ್ತಿದೆ. ಆನೆಯ ದೇಹಗಳನ್ನು ಹಾಗೆಯೇ ಬಿಡುವುದಿಲ್ಲ ಸುಟ್ಟುಹಾಕುತ್ತಿದ್ದೇವೆ.

ಶ್ರೀ ಜಿ.ಎಂ. ಕಾನಡೆ.—ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು.—ಇದರಲ್ಲಿ ಬೇರೆಯವರಿಗೆ ಅವಕಾಶ ಇಲ್ಲ.

ಶ್ರೀಮತಿ ಮುಕ್ತರುನ್ನೀಸಾ ಬೇಗಂ.—ಫಾರೆಸ್ಟ್ ಕಮಿಟಿಯಲ್ಲಿ ಕರ್ನಾಟಕದಿಂದ ಎಷ್ಟು ಜನ ಇದ್ದಾರೆ ?

ಶ್ರೀ ಜಿ.ಎಸ್. ದೇಶ್‌ಮುಖ್.—ಕೇರಳ, ತಮಿಳುನಾಡಿನಲ್ಲಿ ನಮ್ಮ ಹಿರಿಯ ಅಧಿಕಾರಿಗಳು ಹೋಗಿ ತನಿಖೆ ಮಾಡುತ್ತಾರೆ.

ಬೆಂಗಳೂರು ಮತ್ತು ಮೈಸೂರು ಜಿಲ್ಲೆಗಳಲ್ಲಿ ಆನೆಗಳ ಹಾವಳಿ

೮೯ (೨೬೩) ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಅರಣ್ಯ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

೧. ಬೆಂಗಳೂರು ಹಾಗೂ ಮೈಸೂರು ಜಿಲ್ಲೆಗಳಲ್ಲಿ ಕಾಡಾನೆಗಳು ಊರಿಗೆ ನುಗ್ಗಿ ಹಾವಳಿ ಮಾಡುವ ಪ್ರಕರಣಗಳು ಇತ್ತೀಚೆಗೆ ಆಗಾಗ್ಗೆ ಕಾಣಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

೨. ಇಂತಹ ಪ್ರಕರಣಗಳು ಆಗಾಗ್ಗೆ ಮರುಕಳಿಸದಂತಿರಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಜಿ.ಎಸ್. ದೇಶ್‌ಮುಖ್ (ಅರಣ್ಯ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು).—

೧. ಹೌದು.

೨. ಕಾಡು ಆನೆಗಳನ್ನು ಅರಣ್ಯಕ್ಕೆ ಓಡಿಸಲು ಸ್ಥಳೀಯ ಹಾಗೂ ಇಲಾಖಾ ಸಿಬ್ಬಂದಿಯಂದರಿಂದ ಕೂಡಿದ ತಂಡಗಳನ್ನು ನೇಮಿಸಲಾಗಿದೆ. ಆನೆಗಳು ವ್ಯವಸಾಯ ಜಮೀನುಗಳಿಗೆ ಬಂದು ಹಾವಳಿ ಮಾಡದಿರುವಂತೆ ಆನೆ ತಡೆ ಕಂದಕಗಳನ್ನು ರಾಜ್ಯ ಅರಣ್ಯ ಗಡಿಗೆ ಹೊಂದಿಕೊಂಡಿರುವ ವ್ಯವಸಾಯ ಭೂಮಿ ಕಂಡುಬರುವ ಪ್ರದೇಶಗಳಲ್ಲಿ ತೋಡಿಸಲಾಗಿದೆ. ಇದಲ್ಲದೆ ಬೆಳೆ ನಷ್ಟಕ್ಕೆ ಸೂಕ್ತ ಪರಿಹಾರವನ್ನು ಮಂಜೂರು ಮಾಡಲಾಗುತ್ತಿದೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್. ಮಾನ್ಯ ಅಧ್ಯಕ್ಷರೇ, ಕಾಡಾನೆಗಳನ್ನು ಅರಣ್ಯಕ್ಕೆ ಓಡಿಸಲಾಗುವುದು ಎಂದು ಹೇಳಿದ್ದಾರೆ. ಇದು ಸರಿಯಾಗಿ ಅರ್ಥವಾಗಿಲ್ಲ. ಕಾಡಾನೆಗಳನ್ನು ಅರಣ್ಯಕ್ಕೆ ಓಡಿಸುವುದೋ ಅಥವಾ ಇಲಾಖೆಯವರೇ ದಂತ ತೆಗೆದುಕೊಂಡು ಪಾಪವನ್ನು ಪಡೆದುಕೊಳ್ಳುತ್ತಾರೋ? ಈ ಕಾಡಾನೆಗಳು ಬಂದು ಬೆಳೆಗಳನ್ನು ಹಾಳು ಮಾಡುತ್ತಿವೆ. ಇದನ್ನು ಯಾವ ರೀತಿ ತಡೆಹಿಡಿಯಬೇಕು ಮತ್ತು ಬೆಳೆಗಳನ್ನು ಯಾವ ರೀತಿಯಿಂದ ಸಂರಕ್ಷಣೆ ಮಾಡಬೇಕೆಂದು ನಾನು ಕೇಳಿದ್ದು, ದಂತ ಕಿತ್ತುಕೊಳ್ಳುವವರು ಮೊದಲೇ ಕಿತ್ತುಕೊಳ್ಳುತ್ತಾರೆ. ಈ ಉತ್ತರ ಸರಿಹೋಗುವುದಿಲ್ಲ.

ಶ್ರೀ ಜಿ.ಎಸ್. ದೇಶಮುಖ್,—ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾವು ಬೆಂಗಳೂರು ಜಿಲ್ಲೆಯಲ್ಲಿ ೨೧ ಕಿಲೋಮೀಟರ್ ಉದ್ದದ ಮತ್ತು ಮೈಸೂರು ಜಿಲ್ಲೆಯಲ್ಲಿ ೧೭೭ ಕಿಲೋಮೀಟರ್ ಕಂದಕವನ್ನು ತೋಡಿದ್ದೇವೆ. ಆದರೆ ರೈತರು ಕೆಲವು ಕಡೆ ಇದನ್ನು ಮುಚ್ಚಿಬಿಡುವುದರಿಂದ ಆನೆಗಳು ಅಂತಹ ಕಡೆ ಬರುವುದು ಸಹಜವಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಆನೆಗೂ ಇರುಪೆಗೂ ಕೂಡ ಒಂದೇ ಉತ್ತರವಾಗಿದೆ.

ಶ್ರೀ ಜಿ.ಎಸ್. ದೇಶಮುಖ್.—ಸುಮಾರು ಐದುನೂರು ಜನರನ್ನು ಆನೆಪತ್ತೆ ತಡೆ ವೀಕ್ಷಕರನ್ನಾಗಿ ಕ್ರಮಬದ್ಧವಾಗಿ ನೇಮಿಸಲಾಗಿದೆ. ಅವರು ಡ್ರಮ್‌ಗಳನ್ನು ಉಪಯೋಗಿಸಿ ಆನೆಗಳನ್ನು ಓಡಿಸುತ್ತಾರೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಾನ್ಯ ಅಧ್ಯಕ್ಷರೇ, ನಾನು ಒಂದು ಸಲಹೆಯನ್ನು ಕೊಡುತ್ತೇನೆ. ಈಗ ಆನೆಗಳ ಸಂಖ್ಯೆ ಕಡಿಮೆಯಾಗುತ್ತಿದೆ. ದಂತ ಸಿಗುತ್ತದೆ ಎಂದು ಕಾಡಾನೆಗಳನ್ನು ಕೊಲ್ಲುತ್ತಾರೆ ಆದ್ದರಿಂದ ಇವುಗಳನ್ನು ಸಂರಕ್ಷಿಸಿ ಅರಣ್ಯಗಳಿಗೆ ಆನೆಗಳನ್ನು ಕಳಿಸುವ ವ್ಯವಸ್ಥೆ ಮಾಡಬೇಕು.

ಚಿಕ್ಕಮಗಳೂರು ವಿಭಾಗದಲ್ಲಿ ಅರಣ್ಯ ಸಂಚಾರಿ ದಳ

೯೦ (೨೯೬) ಶ್ರೀ ಐ.ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಅರಣ್ಯ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಚಿಕ್ಕಮಗಳೂರು ವಿಭಾಗದ ಅರಣ್ಯ ಇಲಾಖೆಯಲ್ಲಿರುವ ಅರಣ್ಯ ಸಂಚಾರಿ ದಳವು ದಕ್ಷತೆಯಿಂದ ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ?

ಆ) ಕಳೆದ ೨-೩ ವರ್ಷಗಳಿಂದ ಎಷ್ಟು ಮಂದಿ ಕಳ್ಳಸಾಗಾಣಿಕೆದಾರರನ್ನು ಹಿಡಿಯಲಾಗಿದೆ?

ಇ) ಸಂಚಾರಿ ದಳಕ್ಕೆ ನೀಡಿರುವ ವಾಹನಗಳ ಸಂಖ್ಯೆಯನ್ನು ಹೆಚ್ಚಿಸಲಾಗುವುದೇ ?

ಶ್ರೀ ಜಿ.ಎಸ್. ದೇಶಮುಖ್ (ಅರಣ್ಯ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು).—

ಅ) ಹೌದು.

ಆ) ೧೯೮೪-೮೫, ೧೯೮೫-೮೬ ಹಾಗೂ ೧೯೮೬-೮೭ (ಸೆಪ್ಟೆಂಬರ್ ಅಂತ್ಯದವರೆಗೆ) ೬೨ ಗಂಧದ ಕಳ್ಳಸಾಗಾಣಿಕೆಯಲ್ಲಿ ನಿರತರಾದ ೧೬೦ ಮಂದಿಯನ್ನು ಬಂಧಿಸಲಾಗಿದೆ.

ಇ) ಸದ್ಯದಲ್ಲಿ ಈ ರೀತಿ ಬೇಡಿಕೆ ಇಲ್ಲ.

ಶ್ರೀ ಐ.ಬಿ. ಶಂಕರ್.—ಸನ್ಮಾನ್ಯ ಅಧ್ಯಕ್ಷರೇ, ಮೊದಲನೇ ಪ್ರಶ್ನೆಗೆ ''ಹೌದು'' ಎಂದು ಉತ್ತರ ಕೊಟ್ಟಿದ್ದಾರೆ. ಇದನ್ನು ಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ಇವತ್ತಿನವರೆಗೆ ಅಂತಹ ಉತ್ತಮವಾಗಿ ಕೆಲಸ ಮಾಡುವಂಥ ಸಿಬ್ಬಂದಿ ವರ್ಗದವರಿಗೆ ಏನು ಅವಾರ್ಡ್ ಕೊಡುತ್ತಿದ್ದರು, ಅದನ್ನು ಸರ್ಕಾರದವರು ಈಗ ನಿಲ್ಲಿಸಿದ್ದಾರೆ. ಆಮೇಲೆ ಸಂಚಾರಿ ದಳಕ್ಕೆ ನೀಡಿರುವ ವಾಹನಗಳ ಸಂಖ್ಯೆಯನ್ನು ಹೆಚ್ಚಿಸಲಾಗುವುದೇ ಎಂದು ಕೇಳಿರುವ ಪ್ರಶ್ನೆಗೆ, ಸದ್ಯದಲ್ಲಿ ಈ ರೀತಿ ಬೇಡಿಕೆ ಇಲ್ಲ ಎಂದು ಹೇಳಿದ್ದಾರೆ. ಸಂಚಾರಿ ದಳಕ್ಕೆ ಹೊಸ ಜೀಪ್ ಕೊಟ್ಟಿದ್ದರೆ, ಅದನ್ನು ಮೇಲಾಧಿಕಾರಿಗಳು ಉಪಯೋಗಿಸಿಕೊಂಡು, ಹಳೆಯ ಜೀಪನ್ನೇ ಸಂಚಾರಿ ದಳಕ್ಕೆ ಕೊಟ್ಟಿದ್ದಾರೆ. ಇದರ ಬಗ್ಗೆ ಸರ್ಕಾರ ವ್ಯವಸ್ಥೆ ಮಾಡಬೇಕು. ಆಮೇಲೆ ಈ ಅರಣ್ಯ ಇಲಾಖೆಯವರಿಗೆ ವೈರ್‌ಲೆಸ್ ಸೆಟ್ ಒದಗಿಸಿಕೊಡುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.